ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 42/2018

(ಫ್ರಾಸಾ-5 ಚಾಸಾ-13 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 18.11.2025

| | | |
|---|---|---|
| ಸಾಕ್ಷಿದಾರರ ಹೆಸರು | - | ಸಿಂಧೂ ಹೆಚ್. ಎಸ್. |
| ಗಂಡನ ಹೆಸರು | - | ರಘು ಎಸ್ |
| ವಯಸ್ಸು | - | 48 ವರ್ಷ, |
| ಉದ್ಯೋಗ | - | ಡೆಪ್ಯೂಟಿ ಡೈರೆಕ್ಟರ್,<br>ಸಮಾಜ ಕಲ್ಯಾಣ ಇಲಾಖೆ, ರಾಯಚೂರು, |
| ವಾಸ | - | ರಾಯಚೂರು |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು 2013 ರಿಂದ ಜುಲೈ 2018 ರವರೆಗೆ ಸಮಾಜ ಕಲ್ಯಾಣ ಇಲಾಖೆ, ಕೆ. ಆರ್. ಪುರಂ ನಲ್ಲಿ ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ01.06.2017 ರಂದು ಚನ್ನಕೃಷ್ಣ ಎಂಬುವವರು ನನಗೆ ಸಂಜೆ ಸುಮಾರು 06.00 ಘಂಟೆಗೆ ಕರೆ ಮಾಡಿ ಜತ್ತಿ ವಿಲ್ಲಾ ದಲ್ಲಿ ಮ್ಯಾನ್ ಹೋಲ್ ದಲ್ಲಿ ಒಬ್ಬ ವ್ಯಕ್ತಿಯು ಇಳಿದು ಮೃತಪಟ್ಟಿರುತ್ತಾರೆ ಎಂದು ನನಗೆ ಮಾಹಿತಿ ತಿಳಿಸಿರುತ್ತಾರೆ.

2. ತಕ್ಷಣ ನಾನು, ವಾರ್ಡನ್ ರಮೇಶ್ ಹಾಗೂ ವಾರ್ಡನ್ ಉಮೇಶ್ ಸೇರಿ ಸ್ಥಳಕ್ಕೆ ಹೋಗಿ ಪರಿಶೀಲಿಸಿದ್ದು ಆಗ ಸಮಯ ರಾತ್ರಿ ಸುಮಾರು 07.30 ಆಗಿದ್ದರಿಂದ ಕತ್ತಲೆಯಾಗಿದ್ದು ಆಳ ಇದ್ದುದ್ದರಿಂದ ಸರಿಯಾಗಿ ಏನೂ ಕಾಣಿಸಿರಲಿಲ್ಲ. ಮಾರುತಿ ಸರ್ವೀಸಸ್ ರವರು ಪೃಥ್ವಿರಾಜ್, ದಿನೇಶ್ ಮತ್ತು ರಾಜು ಎಂಬ ವ್ಯಕ್ತಿಗಳನ್ನು ಮ್ಯಾನ್ ಹೋಲ್ ಸ್ವಚ್ಚಗೊಳಿಸಲು ವಿಲ್ಲಾಗೆ ಕರೆಸಿದ್ದು ಯಾವುದೇ ಸುರಕ್ಷತಾ ಸಲಕರಣೆಗಳನ್ನು ಹಾಕಿಸದೇ ಮ್ಯಾನ್ ಹೋಲ್ ಗೆ ಇಳಿಸಿದ್ದರಿಂದ ಪೃಥ್ವಿರಾಜ್ ಮೃತರಾಗಿದ್ದು ದಿನೇಶ್ ಮತ್ತು ರಾಜು ಇವರನ್ನು ಕೊಲೊಂಬಿಯಾ ಏಷಿಯಾ ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ತಿಳಿದುಬಂತು.

3. ನಂತರ ನಾವು ಕೊಲೊಂಬಿಯಾ ಏಷಿಯಾ ಆಸ್ಪತ್ರೆಗೆ ಹೋಗಿದ್ದು ದಿನೇಶ್ ನನ್ನು ವಿಚಾರಣೆ ಮಾಡಿದ್ದು ಘಟನೆ ಬಗ್ಗೆ ತಿಳಿದುಬಂದಿರುತ್ತದೆ. ರಾಜು ಐಸಿಯು ನಲ್ಲಿ ಇದ್ದುದ್ದರಿಂದ ಮಾತನಾಡಿಸಲು ಆಗಿರಲಿಲ್ಲ. ನಾನು ದಿನೇಶ್ ರವರನ್ನು ವಿಚಾರಿಸಿದಾಗ ಹಾಗೂ ಆಸ್ಪತ್ರೆಯ ವೈದ್ಯರನ್ನು ವಿಚಾರಿಸಿದಾಗ ಯಾವುದೇ ಮುಂಜಾಗ್ರತ ಕ್ರಮ ಕೈಗೊಳ್ಳದೇ ಮ್ಯಾನ್ ಹೋಲ್ ಗೆ ಇಳಿಸಿದ್ದರಿಂದ ಕೊಳಚೆ ನೀರು ಶ್ವಾಸಕೋಸಕ್ಕೆ ನುಗ್ಗಿ ಪೃಥ್ವಿರಾಜ್ ಮೃತಪಪಟ್ಟಿರುವುದಕ್ಕೆ ಕಾರಣರಾಗಿರುವ ಹಾಗೂ ದಿನೇಶ್ ಮತ್ತು ರಾಜು ಚಿಕಿತ್ಸೆ ಪಡೆಯುತ್ತಿರುವುದಕ್ಕೆ ಕಾರಣರಾದ ಸರ್ವೀಸ್ ರವನ್ನು ಹಾಗೂ ಅವರನ್ನು ಕರೆಸಿದಂತಹ ಜತ್ತಿ ವಿಲ್ಲಾದ ಮಾಲೀಕರಾದ 1 ನೇ ಆರೋಪಿರವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಪೋಲಿಸರಿಗೆ ವರದಿಯನ್ನು ಸಲ್ಲಿಸಿದ್ದೇನೆ. ಪೃಥ್ವಿರಾಜ್, ದಿನೇಶ್ ಮತ್ತು ರಾಜು ಇವರು ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ ಎಂದು ನನಗೆ ವಿಚಾರಣೆಯಲ್ಲಿ ಕಂಡುಬರುತ್ತದೆ ಹಾಗೂ ಈ ಬಗ್ಗೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಅಧಿನಿಯಮ ಕೆಳಗೆ ಕ್ರಮ ಕೈಗೊಳ್ಳಬೇಕೆಂದು ಸಹ ಪೋಲಿಸರಿಗೆ ವರದಿ ಸಲ್ಲಿಸಿರುತ್ತೇನೆ. ಸಾಕ್ಷಿ ಸದರಿ ವರಯನ್ನು ನೋಡಿ ಗುರುತಿಸಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ವರದಿಯನ್ನು ನಿಪಿ-3 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್‌ಪಿಪಿ ರವರು ವಿನಂತಿಸಿದ್ದರಿಂದ ಸಾಕ್ಷಿಯ ವರದಿ ಪರಿಶೀಲಿಸಿ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

4. ನಿಮ್ಮ ವರದಿಯಲ್ಲಿ ಎಸ್ ವಿ ಸರ್ವೀಸಸ್ ಎಂದು ನಮೂದಾಗಿದ್ದು ಮುಖ್ಯ ವಿಚಾರಣೆಯಲ್ಲಿ ಮಾರುತಿ ಸರ್ವೀಸಸ್ ಎಂದು ಹೇಳಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ವರದಿಯಲ್ಲಿ ಎಸ್ ವಿ ಸರ್ವೀಸಸ್ ನ ಮುರುಳಿ, ಪ್ರದೀಪ್ ಮತ್ತು ನಾಗರಾಜ್ ಎಂದು ಬರೆದಿರುವುದು ನಿಜವಾಗಿರುತ್ತದೆ ಎಂದು ಹೇಳುತ್ತಾರೆ. 2017 ರಲ್ಲಿ ಘಟನೆಯಾಗಿದ್ದು ಈಗ ಸಾಕಷ್ಟು ವರ್ಷಗಳಾಗಿದ್ದುದರಿಂದ ನಾನು ಸದರಿ ಸರ್ವೀಸಸ್ ಏಜೆನ್ಸಿಯ ಹೆಸರನ್ನು ಹೇಳುವುದನ್ನು ಮುಖ್ಯ ವಿಚಾರಣೆಯಲ್ಲಿ ತಪ್ಪಾಗಿ ಹೇಳಿದ್ದೇನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎನ್ ಐ ಜಿ ವಕೀಲರಿಂದಃ**

5. ನನಗೆ ಕರೆ ಮಾಡಿದಂತಹ ಚನ್ನಕೃಷ್ಣ ಇವರು ಕರ್ನಾಟಕ ಸಮತ ಸೈನಿಕ ದಳದ ರಾಜ್ಯಾಧ್ಯಕ್ಷರಾಗಿದ್ದರು. ನಾನು ಘಟನೆ ನಡೆದಿದೆ ಎಂದು ಹೇಳಲಾದ ಸ್ಥಳಕ್ಕೆ ಭೇಟಿ ಕೊಟ್ಟ ಸಮಯದಲ್ಲಿ 6-7 ದಿನಗಳು ಕಳೆದಿದ್ದವು ಹಾಗೂ ಶಿವಕುಮಾರ್ ರವರು ಆ ಬಗ್ಗೆ ದೂರು ದಾಖಲು ಮಾಡಿ ಅದಾಗಲೇ ಪ್ರ.ವ.ವರದಿ ದಾಖಲಿಸಲಾಗಿತ್ತು ಎಂದರೆ ಸರಿ. ನಾನು ಸ್ಥಳಕ್ಕೆ ಭೇಟಿ ಮಾಡುವ ಸಮಯದಲ್ಲಿ ಪೋಲಿಸ್ ತನಿಖಾ ದಾಖಲಾತಿಗಳನ್ನು ನೋಡಿರುವುದಿಲ್ಲ. ಈ ಪ್ರಕರಣದಲ್ಲಿರುವ ಸಂಗತಿಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹಾಗೂ ಆಸ್ಪತ್ರೆಗೆ ಭೇಟಿ ಕೊಟ್ಟು ತಿಳಿದುಕೊಂಡಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋದಾಗ ಅಲ್ಲಿ ಬೇರೆ ಯಾರೂ ಹಾಜರಿರಲಿಲ್ಲ.

6. ಎಸ್ ವಿ ಸರ್ವೀಸಸ್ ರವರನ್ನು ದ್ವಾರಕಮಯಿ ವಿಲ್ಲಾದವರು ನೇಮಕ ಮಾಡಿಕೊಂಡಿದ್ದರು ಎಂಬ ವಿಚಾರವನ್ನು ಚಾಸಾ-2 ದಿನೇಶ್ ರವರು ನನಗೆ ಹೇಳಿದ್ದರು. ದಿಃ02.06.2017 ರಂದು ನಾನು ಕೊಲೊಂಬಿಯಾ ಏಷಿಯಾ ಆಸ್ಪತ್ರೆಗೆ ಭೇಟಿ ಮಾಡಿದಾಗ ದಿನೇಶ್ ರವರು ಈ ವಿಚಾರವನ್ನು ನನಗೆ ತಿಳಿಸಿದ್ದರು. ನಾನು ಹೇಳಿದಂತೆ ದಿನೇಶ್ ರವರು ಕೊಲೊಂಬಿಯಾ ಏಷಿಯಾ ಆಸ್ಪತ್ರೆಯಲ್ಲಿ ದಾಖಲಾಗಿರಲಿಲ್ಲ ಹಾಗೂ ನನಗೆ ಯಾವುದೇ ವಿಚಾರವನ್ನು ಅಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕಾಂಪ್ಲೆಂಕ್ಸ್ ನಲ್ಲಿ ಬೇರೆ ಬೇರೆ ಮಾಲೀಕರಿಗೆ ಸೇರಿದ ಒಟ್ಟು 50 ವಿಲ್ಲಾಗಳು ಇವೆ ಎಂದರೆ ಎಷ್ಟು ವಿಲ್ಲಾಗಳು ಇವೆ ಎಂದು ನನಗೆ ಗೊತ್ತಿಲ್ಲ. ಆದರಿ ಅದು 1 ನೇ ಆರೋಪಿಗೆ ಸೇರಿದ ವಿಲ್ಲಾ ಎಂದು ತಿಳಿದುಬಂತು. ಎಸ್ ವಿ ಸರ್ವೀಸಸ್ ಹಾಗೂ 1 ನೇ ಆರೋಪಿತಳ ನಡುವೆ ಆದಂತಹ ಕೊಟೇಷನ್, ಬಿಲ್ಲು ಹಾಗೂ ಅಗ್ರಿಮೆಂಟ್ ಅನ್ನು ನಾನು ನೋಡಿರುವುದಿಲ್ಲ. 1 ನೇ ಆರೋಪಿಯು ಯಾವ ಯಾವ ಕೆಲಸಗಳನ್ನು ಎಸ್ ವಿ ಸರ್ವೀಸಸ್ ಇವರಿಗೆ ವಹಿಸಿದ್ದರು ಎಂದು ನನಗೆ ಗೊತ್ತಿಲ್ಲ. ದಿನೇಶ್ ರವರು ಹೇಳಿದ್ದು ಮಾತ್ರ ಗೊತ್ತು. 1 ನೇ ಆರೋಪಿಯು ಎಸ್ ವಿ ಸರ್ವೀಸಸ್ ಇವರಿಗೆ ಮ್ಯಾನ್ ಹೊಲ್ ಸ್ವಚ್ಚ ಮಾಡುವ ಯಾವ ಕೆಲಸವನ್ನು ಸಹ ವಹಿಸಿರಲಿಲ್ಲ ಎಂದರೆ ಸರಿಯಲ್ಲ. ದೂರು ನೀಡುವುದಕ್ಕಿಂತ ಮೊದಲು

ನಾನು ಘಟನೆಯ ಬಗ್ಗೆ ಎಸ್ ವಿ ಸರ್ವೀಸಸ್ ರವರನ್ನು ಅಥವಾ 1 ನೇ ಆರೋಪಿಯನ್ನು ನಾನು ವಿಚಾರಣೆ ಮಾಡಲಿಲ್ಲ. 1 ನೇ ಆರೋಪಿಯು ಎಸ್ ವಿ ಸರ್ವೀಸಸ್ ಇವರಿಗೆ ಟ್ಯಾಂಕ್ ಅನ್ನು ಸ್ವಚ್ಚಗೊಳಿಸಲು ಕೆಲಸವನ್ನು ವಹಿಸಿದ್ದರೇ ವಿನಃ ಎಸ್ ಟಿ ಪಿ ಸ್ವಚ್ಚಗೊಳಿಸುವ ಕೆಲಸವನ್ನು ವಹಿಸಿರಲಿಲ್ಲ ಎಂದರೆ ಸರಿಯಲ್ಲ. ಪೃಥ್ವಿರಾಜ್ ಇವರ ಸಾವು ಎಸ್ ಟಿ ಪಿ ಗೆ ಇಳಿಸಿದ್ದರಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ.

7. ಎಸ್ ವಿ ಸರ್ವೀಸಸ್ ಇವರಿಗೆ ಕೆಲಸ ವಹಿಸುವಾಗ ಪೃಥ್ವಿರಾಜ್, ದಿನೇಶ್ ಮತ್ತು ರಾಜು ಇವರ ಜಾತಿ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ಹೇಳಿದ ಘಟನೆಗೂ ಹಾಗೂ 1 ನೇ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖಾ ಅಂಕಿಅಂಶಗಳಿಗೋಸ್ಕರ ನಿಪಿ-3 ರಂತೆ ಸುಳ್ಳು ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಸ್ ಎನ್ ವಕೀಲರಿಂದಃ</u>**

8. 2 ಮತ್ತು 3 ನೇ ಆರೋಪಿ ಹಾಗೂ ನಾಗರಾಜ್ ಇವರು ಎಸ್ ವಿ ಸರ್ವೀಸಸ್ ನ ಏಜೆಂಟರು ಎಂದು ನಾನು ದಿನೇಶ್ ಮೂಲಕ ತಿಳಿದುಕೊಂಡೆ, ಆ ಬಗ್ಗೆ ನಾನು ದಾಖಲಾತಿ ನೋಡಿರುವುದಿಲ್ಲ. 2 ಮತ್ತು 3 ನೇ ಆರೋಪಿತರು ಸಹ ಪರಿಶಿಷ್ಟ ಜಾತಿಗೆ ಸೇರಿದವರು ಎಂದರೆ ನನಗೆ ಗೊತ್ತಿಲ್ಲ.

(1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಉಳಿದ ಪಾಟೀ ಸವಾಲಾಗಿ ಅಳವಡಿಸಿಕೊಳ್ಳುವುದಾಗಿ ನಿವೇದಿಸಿರುತ್ತಾರೆ)

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು